ಶ್ರೀ ಪಿ.ಕೆ. ಕಳ್ಳಿಗುಡ್ಡ.—(ಪಟ್ಟಿಯಲ್ಲಿರುವ ಪ್ರಶ್ನೆಯನ್ನೇ ಓದಿದರು.)

ಅಧ್ಯಕ್ಷರು.—ತಾವು ಕಳುಹಿಸಿದ್ದ ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ತಾವು ಏನಾದರೂ ಉಪ ಪ್ರಶ್ನೆ ಇದ್ದರೆ ಕೇಳಿ. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ಕೆ. ಕಳ್ಳಿಗುಡ್ಡ.—ನನ್ನ ಪ್ರಶ್ನೆಗೆ ಉತ್ತರವನ್ನು ಸರ್ಕಾರ ಕೊಟ್ಟಿದೆ. ಆದರೆ ಸ್ಥಳದಲ್ಲಿ ಯಾವುದೇ ಕಾರ್ಯಗಳು ಆಗಿಲ್ಲ. ಅಲ್ಲಿ ಸೇತುವೆಯನ್ನು ಕಟ್ಟಿಲ್ಲ. ರಸ್ತೆ ಮಾಡಿಲ್ಲ. ಏನೂ ಆಗಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ವಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಜೋಳಚಗುಡ್ಡದಿಂದ ಗೋಣಕೊಪ್ಪ ಗ್ರಾಮಕ್ಕೆ ಲೋಕೋಪಯೋಗಿ ರಸ್ತೆಯೊಂದಿರುವುದೆ? ಎಂಬುದಾಗಿ ಕೇಳಿದ್ದಾರೆ. ಅದಕ್ಕೆ ಹೌದು ಎಂದು ಹೇಳಿದ್ದೇವೆ. ಮತ್ತು ಸದರಿ ರಸ್ತೆಯ ಮೇಲೆ ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯವರು ಬಸ್ಸುಗಳನ್ನು ಓಡಿಸುತ್ತಿದ್ದಾರೆಯೇ? ಎಂಬುದಾಗಿ ಕೇಳಿದ್ದಾರೆ. ಅದಕ್ಕೂ ಕೂಡ ಹೌದು ಎಂಬುದಾಗಿ ಹೇಳಿದ್ದೇವೆ. ಈ ರೀತಿ ಮಾನ್ಯ ಸದಸ್ಯರ ಇನ್ನೂ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ತಿಳಿಸಿದ್ದೇವೆ. ಕೆಲವು ಸಿ.ಡಿ. ವರ್ಕ್ಸ್‌ಗಳು ಆಗಬೇಕು. ಮುಳಿಗಾಲದಲ್ಲಿ ಬಹಳ ತೊಂದರೆ. ಸಣ್ಣಪುಟ್ಟ ಸೇತುವೆಗಳು ಆಗಬೇಕಾಗಿವೆ ಎಂದು ಸರ್ಕಾರದಿಂದ ನಾವೇ ಹೇಳಿದ್ದೇವೆ. ಮಾನ್ಯ ಸದಸ್ಯರು ಆ ಪ್ರಶ್ನೆಗಳನ್ನು ಬಿಟ್ಟು ಬೇರೆ ಪ್ರಶ್ನೆಯನ್ನು ಕೇಳಿದರೆ ನಾನು ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಶ್ರೀ ಪಿ.ಕೆ. ಕಳ್ಳಿಗುಡ್ಡ.—ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಬಸ್ಸುಗಳು ಓಡಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಅಲ್ಲಿ ಇದುವರೆಗೂ ಯಾವುದೇ ಬಸ್ಸುಗಳು ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ನಿಜವಾದ ವಿಚಾರವನ್ನು ಹೇಳುತ್ತಿದ್ದಾರೆ. ಬಸ್ಸುಗಳು ಎಲ್ಲಾ ಕಾಲದಲ್ಲಿ ಆ ರಸ್ತೆಯಲ್ಲಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಅಲ್ಲಿ ೩ ಸಿ.ಡಿ. ವರ್ಕ್ಸ್‌ಗಳು, ಒಂದು ಒಂದು ಲಕ್ಷ ರೂಪಾಯಿಯ ಅಂದಾಜಿನಲ್ಲಿ, ಮತ್ತೊಂದು ೨ ಲಕ್ಷ ರೂಪಾಯಿಗಳ ಅಂದಾಜಿನದ್ದು ಮಗದೊಂದು ಎರಡೂವರೆ ಲಕ್ಷ ರೂಪಾಯಿಗಳ ಅಂದಾಜಿನದ್ದು. ಈ ರೀತಿಯಾಗಿ ಮೂರು ಸಿ.ಡಿ. ವರ್ಕ್ಸ್‌ಗಳನ್ನು ತೆಗೆದುಕೊಳ್ಳದೆ ಎಲ್ಲಾ ಕಾಲದಲ್ಲೂ ಬಸ್ಸುಗಳನ್ನು ಓಡಿಸುವುದಕ್ಕೆ ಆಗುವುದಿಲ್ಲ ಎಂಬುದನ್ನು ನಾನೇ ಒಪ್ಪಿಕೊಳ್ಳುತ್ತಿದ್ದೇವೆ. ಆದಷ್ಟು ಶೀಘ್ರವಾಗಿ ಈ ೩ ಸಿ.ಡಿ. ವರ್ಕ್ಸ್‌ಗಳನ್ನು ತೆಗೆದುಕೊಂಡು ಖಾಯಂ ಆಗಿ ಬಸ್ಸುಗಳು ಆ ರಸ್ತೆಯಲ್ಲಿ ಓಡಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಈ ವರೆಗೆ ಸೇತುವೆ ನಿರ್ಮಾಣವನ್ನು ಕೈಕೊಳ್ಳದಿರುವುದಕ್ಕೆ ಕಾರಣಗಳೇನು ಎಂಬ ಪ್ರಶ್ನೆಗೆ ಹಣದ ಕೊರತೆಯಿಂದಾಗಿ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಜನರಿಗೆ ರಸ್ತೆ ಇಲ್ಲವೆ, ಮತ್ತೆ ಸೇತುವೆ ನಿರ್ಮಾಣವಾದೆ ಸಾಕಷ್ಟು ತೊಂದರೆಪಡುತ್ತಿದ್ದಾರೆ. ಆದ್ದರಿಂದ ಆದಷ್ಟು ತೀವ್ರವಾಗಿ ಆ ಸೇತುವೆ ನಿರ್ಮಾಣವನ್ನು ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ನಮಗೆ ಹಣಕಾಸು ದೊರೆಯಬೇಕೆಂಬುದನ್ನು ಆಧಾರವಾಗಿಟ್ಟುಕೊಂಡು ಆ ರೀತಿ ಉತ್ತರದಲ್ಲಿ ತಿಳಿಸಿದ್ದೇವೆ. ಇದಕ್ಕಾಗಿ ಹಣವನ್ನು ಒದಗಿಸಿಕೊಂಡು ಆದಷ್ಟು ಜಾಗ್ರತೆ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಈ ವರ್ಷದ ಬಜೆಟ್ಟಿನಲ್ಲಿ ಅಳವಡಿಸಲಾಗುವುದೆ?

ಶ್ರೀ ಎಸ್. ಬಂಗಾರಪ್ಪ.—ಪ್ರಯತ್ನ ಮಾಡುತ್ತೇನೆ.

Working Days and Holidays in Primary and Secondary Schools.

160. SRI ANANDA KUNDA HEGDE (Brahmavar) —Will the Minister for Education be pleased to state:—

---

† indicate that remarks or speeches have not been revised by the member concerned.

(*a*) the number of working days and Holidays in Primary Education Section of Education department in a year;

(*b*) the number of working days and Holidays in Higher Education Section of Education department?

SRI B. SUBBAYYA SHETTY (Minister for Education.).—

(*a*) The working days and holidays in Primary Schools have been classified in three divisions depending upon the climatic conditions of those area as follows:

1. Normal Division:

Working days	*Holidays*
224	90+51=141

2. Hot Regions:

Working days	*Holidays*
222	92+51=143

3. Coastal Regions and Coorg District:

Working days	*Holidays*
221	93+51=144

(*b*).—

Working days	*Holidays*
225	140

ಶ್ರೀ ಆನಂದಕುಂದ ಹೆಗ್ಡೆ.—ವಿದ್ಯಾ ಇಲಾಖೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗ ಗಳಲ್ಲಿ ಒಟ್ಟು ಕೆಲಸದ ದಿನಗಳು ಎಷ್ಟು ಮತ್ತು ರಜಾ ದಿನಗಳು ಎಷ್ಟು ಎಂಬುದನ್ನು ಹೇಳುತ್ತೀರಾ?

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಸಾಮಾನ್ಯವಾಗಿ ಸರ್ಕಾರಿ ನಿಯಮಾವಳಿ ಪ್ರಕಾರ ಪ್ರೌಢಶಾಲೆಯ ಕೆಲಸದ ದಿನಗಳು ೨೨೦ಕ್ಕಿಂತ ಕಡಿಮೆ ಇರಬಾರದೆಂದು ಇದೆ. ಆ ವಿವರಗಳನ್ನೆಲ್ಲ ಉತ್ತರದಲ್ಲೇ ಕೊಡಲಾಗಿದೆ.

ಶ್ರೀ ಆನಂದಕುಂದ ಹೆಗ್ಡೆ.— ಇಲ್ಲಿ ರಜಾದಿನಗಳನ್ನು ಮತ್ತು ಕೆಲಸದ ದಿವಸಗಳನ್ನು ಹೇಳಿದ್ದೀರಿ ನಿಜ. ಆದರೆ ಅಧ್ಯಾಪಕರ ಐಚ್ಛಿಕ ಅಧಿಕೃತ ರಜೆ ಇವೆಲ್ಲವುಗಳ ಹೊನ್ನೆಲೆಯಲ್ಲಿ ಶಾಲಾ ದಿನದ ರಜೆಗೂ ಉಪಾಧ್ಯಾಯರ ರಜೆಗೂ ಪ್ರತ್ಯೇಸ ಇಲ್ಲವಾಗಿದೆ. ಹೇಗೆಂದರೆ ಏಕೋಪಾಧ್ಯಾಯ ಶಾಲೆಗಳಲ್ಲಿ ಅಧ್ಯಾಪ ಕರ ರಜಾದಿನವೂ ಮತ್ತು ಶಾಲಾ ರಜಾದಿನವೂ ಒಂದೇ ಆಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ ಯೆ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಮಾನ್ಯ ಸದಸ್ಯರು ಏನು ಕೆಲಸದ ದಿನಕ್ಕೂ ರಜಾದಿನಕ್ಕೂ ವ ತ್ಯಾಸ ವಿಲ್ಲದಂತಾಗಿದೆ ಎಂದು ಹೇಳಿದರು. ಆ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ವಿಂಡಿತವಾಗಿ ಕ್ರಮ ತೆಗೆದುಕೊಳ್ಳಲಾಗುವುದು. ಏಕೋಪಾಧ್ಯಾಯರ ಶಾಲೆಗಳಲ್ಲಿ ಉಪಾಧ್ಯಾಯರ ರಜಾದಿನ ಮತ್ತು ಶಾಲಾ ರಜಾದಿನ ಒಂದೇ ಆಗಿದೆ ಎಂದು ಏನು ಹೇಳಿದ್ದಾರೆ ಅದು ನಮ್ಮ ಗಮನಕ್ಕೆ ಬಂದಿಲ್ಲ. ಉಪಾ ಧ್ಯಾಯರು ಏನಾದರೂ ರಜ ತೆಗೆದುಕೊಳ್ಳುವುದಾದರೆ ಹತ್ತಿರದ ಶಾಲಾ ಉಪಾಧ್ಯಾಯರಿಗೆ ತಿಳಿಸಿ ಅಲ್ಲಿಂದ ಉಪಾಧ್ಯಾಯರು ಬಂದ ಬಳಿಕ ರಜ ತೆಗೆದುಕೊಳ್ಳಬೇಕೆಂದು ಇದೆ. ಹಾಗೆ ಮಾಡದೆ ಅಂಥ ಲೋಪದೋಷಗಳಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಗೋವಿಂದಗೌಡ.—ಸರ್ಕಾರದವರು ೧೪೧ ದಿನಗಳ ಕಾಲ ಶಾಲೆಗೆ ರಜಾ ಕೊಡುವುದರ ಜೊತೆಗೆ ಉಪಾಧ್ಯಾಯರು ಗೈರು ಹಾಜರಾಗಿ ಸುಮಾರು ೩೦-೪೦ ದಿವಸ ರಜಾ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಾದರೆ ಅಂಥ ಶಾಲೆಗಳ ಪರಿಸ್ಥಿತಿ ಏನು?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆ ಬಗ್ಗೆ ನಾನು ಈಗಾಗಲೇ ಉತ್ತರಿಸಿದ್ದೇನೆ. ಅಂಥ ನಿದರ್ಶನಗಳು ಇದ್ದರೆ ಮಾನ್ಯ ಸದಸ್ಯರುಗಳಾಗಲೀ ಅಥವಾ ಯಾರೇ ಸಾರ್ವಜನಿಕರಾಗಲಿ ತಿಳಿಸಿದರೂ ಕೂಡಾ ಆ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎ. ಶೀರ್ನಳ್ಳಿ ಚಂದ್ರಶೇಖರ್.—ನಾನು ಉಪಾಧ್ಯಾಯರ ಪಕ್ಷವನ್ನು ಪ್ರಶ್ನಿಸುವುದಿಲ್ಲ. ಎಲ್ಲ ಅಧಿಕಾರಿಗಳಿಗೆ ಇದ್ದಂತೆ ಅವರಿಗೂ ರಜಾ ತೆಗೆದುಕೊಳ್ಳುವ ಹಕ್ಕು ಇರುತ್ತದೆ. ಮಲೆನಾಡಿನಲ್ಲಿ ಅನೇಕ ಶಾಲೆಗಳು ಏಕೋಪಾಧ್ಯಾಯರ ಶಾಲೆಗಳಾಗಿವೆ ನಿಮ್ಮ ಪ್ರಕಾರವೇ ಇವತ್ತು ೧೪೧—೧೪೩—೧೪೪ ರಜಾದಿನಗಳು ಇವೆ ಇಷ್ಟು ದಿನ ರಜೆಯನ್ನು ತೆಗೆದುಕೊಂಡರೂ ಕೂಡ ಬೇರೆ ದಿನಗಳಲ್ಲೂ ಬೀಗ ಹಾಕಿರುತ್ತಾರೆ. ಇದಕ್ಕೆ ಏನು ಉಪಾಯ ಕಂಡುಹಿಡಿಯುತ್ತೀರಿ? ಒಬ್ಬ ಉಪಾಧ್ಯಾಯ ಇರುವ ಕಡೆ ತಾನು ರಜಾ ಹಾಕಿ ಹೋದರೆ ಆ ಶಾಲೆಯ ಮಕ್ಕಳಿಗೂ ರಜ, ಈ ಒಂದು ನ್ಯೂನತೆಯನ್ನು ಹೇಗೆ ಹೋಗಲಾಡಿಸುತ್ತೀರಿ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಈಗಾಗಲೇ ಆ ಬಗ್ಗೆ ಉತ್ತರ ಹೇಳಿದ್ದೇನೆ. ಯಾವ ರೀತಿ ಏಕೋಪಾಧ್ಯಾಯರಿರುವ ಶಾಲೆಗಳಲ್ಲಿ ಉಪಾಧ್ಯಾಯರು ರಜಾ ತೆಗೆದುಕೊಳ್ಳಬೇಕು ಏನು ಮಾಡಬೇಕೆಂಬುದಕ್ಕೆಲ್ಲ ರೂಲ್ ಇದೆ. ಆ ಪ್ರಕಾರ ಅವರು ನಡೆದುಕೊಳ್ಳಬೇಕು. ಹಾಗೆ ನಡೆದುಕೊಳ್ಳದಿದ್ದರೆ ಅಂಥವರ ವಿರುದ್ಧ ನಿಯಮಾವಳಿಯ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

Sri K. BHASKER NAIDU.– From the reply furnished it is noted that in the Normal Division, the working days is 224.. in the Hot Regions, it is 222 and in the Coastal Regions and Coorg District, it is 221 days. May I know the reasons for this great difference of Working days in Normal Division, Hot Regions and Costal Regions and Coorg District?

Sri B. SUBBAIAH SHETTY.-Considering the local conditions, it was after much discussion, these days have been classified in 1977. But anyway, that minimum 220 days, are being observed but there are minor variations. However. this entire question of revising the scheme of holidays now again is under the consideration of the Government and I request all the Hon. Members, after seeing the experience of the working of this scheme of holidays, to give their suggestions to the Government so that we will be benifitted by their suggestions and we will be able to revise if it is required.

ಶ್ರೀ ಬೌಡರೆಡ್ಡಿ.—ಏಕೋಪಾಧ್ಯಾಯರ ಶಾಲೆಗಳಲ್ಲಿ ಯಾವ ಒಂದು ಬದಲಿ ವ್ಯವಸ್ಥೆಯೂ ಇಲ್ಲದೆ ಆರಾರು ತಿಂಗಳುಗಳ ಕಾಲ ತರಬೇತಿಗೆ ಕಳುಹಿಸುತ್ತಾರೆ.. ಅಂಥ ಸಂದರ್ಭದಲ್ಲಿ ಏನು ಮಾಡುತ್ತೀರಿ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಹಾಗೆ ಕಳುಹಿಸಬಾರದು.

ಶ್ರೀ ಕೆ. ಹೆಚ್. ಹನುಮೇಗೌಡ.—ಶಾಲೆಗಳಿಗೆ ಬೇಸಿಗೆ ಕಾಲದಲ್ಲಿ ರಜೆ ಕೊಡುವುದು ಬ್ರಿಟಿಷರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಮತ್ತು ಈಗಲೂ ಕೂಡ ಅದೇ ಪದ್ಧತಿ ಮುಂದುವರೆಯುತ್ತಿದೆ. ಮಳೆಗಾಲದಲ್ಲಿ ಸೋನೆ ಹಿಡಿದು ಮಕ್ಕಳೇನು ದೊಡ್ಡವರೂ ಕೂಡ ಹೊರಗಡೆ ಬರುವುದು ಕಷ್ಟವಾಗಿರುತ್ತದೆ. ಆದ್ದರಿಂದ ಬೇಸಿಗೆಯ ಕಾಲದಲ್ಲಿ ರಜ ಕೊಡುವ ಪದ್ಧತಿಯನ್ನು ಬದಲಾವಣೆ ಮಾಡಿ ಕೊನೇ ಪಕ್ಷ ಮಳೆಗಾಲದಲ್ಲಿ ಕೊಟ್ಟರೆ ಮಕ್ಕಳ ಆರೋಗ್ಯವೂ ಚೆನ್ನಾಗಿರುತ್ತದೆ. ಜೊತೆಗೆ ನಮ್ಮದು ವ್ಯವಸಾಯ

ದೇಶವಾದ್ದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳು ಆ ಕಾಲದಲ್ಲಿ ವ್ಯವಸಾಯಕ್ಕೆ ಸ್ವಲ್ಪವಾದರೂ ಸಹಾಯ ಮಾಡುವುದರಿಂದ ತಂದೆ ತಾಯಿಗಳಿಗೂ ಕೂಡ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಬೇಸಿಗೆ ಕಾಲದಲ್ಲಿ ರಜ ಕೊಡುವುದರ ಬದಲಿಗೆ ಮಳೆಗಾಲದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಆದರ ಬಗ್ಗೆ ಹೇಳುವುದೇನೆಂದರೆ ಈ ಯೋಜನೆಯನ್ನು ತಯಾರು ಮಾಡುವಾಗ ಅಂದರೆ ೧೯೭೭ರಲ್ಲೇ ಇದೆಲ್ಲವನ್ನು ಚರ್ಚೆ ಮಾಡಿ ಮಾಡಿದ್ದಾರೆಂದು ನನ್ನ ಭಾವನೆ. ಆದರೆ ಈಗ ಮಾನ್ಯ ಸದಸ್ಯರಾದ ಹನುಮೇಗೌಡರು ಮತ್ತು ಇನ್ನೂ ಕೆಲವು ಸದಸ್ಯರುಗಳು ಇಲ್ಲಿ ಹೇಳಿದಿದ್ದರೂ ಹೊರಗಡೆ ತಿಳಿಸಿದ್ದಾರೆ. ಇದರಲ್ಲಿ ಕೊಂಚ ಬದಲಾವಣೆ ಆಗುವುದು ಅಗತ್ಯವಾಗಿದೆ ಎಂದು. ಬದಲಾವಣೆ ಯಾಗಬೇಕಾದ ಪಕ್ಷದಲ್ಲಿ ಬದಲಾವಣೆ ಮಾಡುವುದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ ಆದ್ದರಿಂದ ಮಾನ್ಯ ಸದಸ್ಯರುಗಳು ಯಾವ ರೀತಿ ಬದಲಾವಣೆಯಾಗಬೇಕೆಂಬುದನ್ನು ಸರ್ಕಾರಕ್ಕೆ ದಯಮಾಡಿ ಲಿಖಿತ ಮೂಲಕ ತಿಳಿಸಬೇಕೆಂದು ಹೇಳುತ್ತೇನೆ.

SRI PRABHAKAR TELKAR.– Some hon. friends have just now submitted that some teachers will be away on training for six months or so. But I would like to bring to the notice of the Government that there are some villages where even the single teacher is also not there for the last two years In some schools in the villages, the teacher has not at all come to teach the students. May I know whether the Government will take steps to see that something is done to solve this problem? I have just written a letter to the Hon. Minister also in this connection.

SRI B. SUBBAIAH SHETTY.—If the teacher has gone unauthorisedly, definitely action will be taken against such teacher.

ಶ್ರೀ ರಮೇಶ್ ಕುಮಾರ್.—ಈಗ ಮಾನ್ಯ ಮಂತ್ರಿಗಳು ಎಲ್ಲೆಲ್ಲಿ ಉಪಾಧ್ಯಾಯರು ಶಾಲೆಗೆ ಹಾಜರಾಗದೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದರೆ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ, ಕೆಲವು ಶಾಲೆಗಳಲ್ಲಿ ಉಪಾಧ್ಯಾಯರು ಶಾಲೆಗೆ ಹಾಜರಾಗದ ವಿವ್ಯಾಧಿಕಾರಿಗಳೊಡನೆ ಶಾಮೀಲಾಗಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆಂಬ ದೂರುಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಆದರೂ ಕೂಡ ಆ ಬಗ್ಗೆ ಇದುವರೆಗೆ ಯಾವ ಕ್ರಮವನ್ನು ತೆಗೆದು-ಕೊಂಡಿಲ್ಲ. ಮುಂದೆಯಾದರೂ ಶೀಘ್ರಗತಿಯಲ್ಲಿ ಕ್ರಮ ಜರುಗಿಸುತ್ತೇವೆಂಬ ಭರವಸೆಯನ್ನು ಬಯಸ ಬಹುದೆ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸದಸ್ಯರು ಹೇಳುತ್ತಿರತಕ್ಕ ನಿದರ್ಶನ ಯಾವುದು ಎಂದು ನನಗೆ ಗೊತ್ತಿಲ್ಲ. ಅಂಥ ನಿದರ್ಶನಗಳು ನನ್ನ ಗಮನಕ್ಕೆ ಬಂದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳು-ತ್ತೇನೆ. ಕೆಲವು ಶಾಲೆಗಳಲ್ಲಿ ಉಪಾಧ್ಯಾಯರು ಹಾಜರಾಗುತ್ತಿಲ್ಲವೆಂಬ ದೂರುಗಳು ಬರುತ್ತಿವೆ. ಹಾಗೆ ಬಂದಾಗಲೆಲ್ಲ ಆ ಬಗ್ಗೆ ತನಿಖೆ ನಡೆಸುತ್ತಿದ್ದೇವೆ. ಮತ್ತು ತನಿಖೆ ನಡೆಸಿ ಸರಿ ಎಂದು ಕಂಡುಬಂದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಆದರೆ ಕೆಲವೊಮ್ಮೆ ನಮಗೆ ಇರತಕ್ಕ ತೊಂದರೆ ಏನೆಂದರೆ ಈಗಿರುವ ಪದ್ಧತಿ ಪ್ರಕಾರ ನಮಗೆ ಮಾಹಿತಿ ಪಡೆಯಲು ಕಷ್ಟವಾಗುತ್ತದೆ. ಇದಕ್ಕೆ ಬೇರೆ ಒಂದು ರೀತಿಯ ಆಲೋಚನೆಯನ್ನು ಸರ್ಕಾರ ಮಾಡುತ್ತಿದೆ. ಅದೇನೆಂದರೆ ಕೆಲವು ಗ್ರಾಮಸ್ಥರನ್ನು ಗೊತ್ತುಪಡಿಸಿ ಆಯಾಯ ಊರಿನ ಶಾಲೆಗಳಿಗೆ ಉಪಾಧ್ಯಾಯರುಗಳು ಸರಿಯಾಗಿ ಹೋಗುತ್ತಾರೋ ಇಲ್ಲವೋ ಎಂಬ ಬಗ್ಗೆ ಉಸ್ತುವಾರಿ ನೋಡಿಕೊಳ್ಳುವಂತೆ ಮಾಡಬೇಕೆಂಬ ಆಲೋಚನೆ ಸರ್ಕಾರದ ಮುಂದೆ ಇದೆ.

೧-೩೦. ಪಿ. ಎಂ.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ ಮಲೆನಾಡಿನ ಭಾಗದಲ್ಲಿ ಸಾಮಾನ್ಯವಾಗಿ ಸಿಂಗಲ್ ಟೀಚರ್ ಇರುವುದೇ ಜಾಸ್ತಿ. ಈ ಉಪಾಧ್ಯಾಯರುಗಳು ರಜಾ ಹಾಕಿ ಹೋಗಬೇಕಾದರೆ ಅವರು ರಜಾ ಚೀಟಿಯನ್ನು ಯಾರಿಗೆ ಕೊಟ್ಟು ಹೋಗುತ್ತಾರೆ ಸ್ವಾಮಿ? ಇದು ಒಂದನೇ ಪ್ರಶ್ನೆ.

ಇನ್ನು ಎರಡನೇ ಪ್ರಶ್ನೆ, ಏನೆಂದರೆ ಕೆಲವು ಮಾಸ್ಟರುಗಳು ಆ ಊರಿನಲ್ಲೇ ವಾಸ ಇರುವುದಿಲ್ಲ. ಅವರು ಟೌನ್‌ನಲ್ಲೋ ಅಥವಾ ಇನ್ನೆಲ್ಲೋ ವಾಸ ಇದ್ದುಕೊಂಡು ಇಲ್ಲಿಗೆ ಬರುತ್ತಾರೆ. ಆ ಸ್ಕೂಲಿಗೆ ಒಂದು ದಿವಸವೋ ಅಥವಾ ಎರಡು ದಿವಸವೋ ಬರುತ್ತಾರೆ. ಏನಾದರೂ ಕೇಳಿದರೆ ನಾನು ರಜಾ ತೆಗೆದು ಕೊಂಡಿದ್ದೇನೆ ಎಂದು ಹೇಳುತ್ತಾರೆ. ಆದುದರಿಂದ ಇವರಿಗೆ ಎಷ್ಟು ದಿವಸ ಸಿ. ಎಲ್. ಇದೆ ಅನ್ನುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ :—ಸರ್ಕಾರಿ ರೂಲ್ಸ್ ಪ್ರಕಾರ ಎಷ್ಟು ಸಿ. ಎಲ್ ಇದೆಯೋ ಅಷ್ಟು ಅವರಿಗೆ ಕೊಡಬೇಕಾಗುತ್ತದೆ. ಅವರು ಬರದೇ ಹೋದರೆ ಏನಾಗುತ್ತದೆ ಎಂಬುದನ್ನು ನಾನು ಈ ಮೊದಲೇ ಈ ಮನೆಯಲ್ಲಿ ಉತ್ತರಿಸಿದ್ದೇನೆ. ಆದ್ದರಿಂದ ಮತ್ತೆ ಎರಡನೇ ಪ್ರಶ್ನೆಗೆ ನಾನು ಉತ್ತರ ಹೇಳಬೇಕಾದ ಅಗತ್ಯ ಇಲ್ಲ ಎಂದು ಹೇಳುತ್ತೇನೆ.

State Highway between Sankeshwar-Hukkeri Bridges

249 SRI S. MALHARGOUDA PATIL (Sankeshwar)—Will the Minister for Public Works be pleased to state :—

(a) whether plan and estimates have been prepared for conversion of small dips between Sankeshwar-Hukkeri State Highway channels into bridges ;

(b) the steps being taken by the Government to complete the same ?

SRI S. BANGARAPPA (Minister for Public Works)—

(a) No

(b) These works will be taken depending on the financial condition.

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ಸ್ವಾಮಿ ಈ ಒಂದು ರಸ್ತೆ ತಾಲ್ಲೂಕು ಕಛೇರಿಗೂ ಮತ್ತು ರೈಲ್ವೆ ಲೈನಿಗೂ ಹೋಗತಕ್ಕಂಥಾ ಒಂದು ಮುಖ್ಯ ರಸ್ತೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ಎಸ್. ಬಂಗಾರಪ್ಪ.—ನನ್ನ ಗಮನಕ್ಕೆ ಬಂದಿದೆ.

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ಸ್ವಾಮಿ, ಈ ವರ್ಷದ ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಒಟ್ಟು ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದು ನನಗೆ ಕರಾರು ವಾಕ್ಕಾಗಿ ಗೊತ್ತಿಲ್ಲ. ಈ ಬಗ್ಗೆ ಒಂದು ನಕ್ಷೆ ಮತ್ತು ಅಂದಾಜನ್ನು ಇನ್ನೂ ಸಿದ್ಧ ಮಾಡಿಲ್ಲಾ. ಕಮರ್ ನೂರ್ ನಾಲಾ ವತ್ತು ಬಾವಾಪೂರ್ ನಾಲಾ ಈ ಎರಡರ ಬಗ್ಗೆಯೂ ಡಿಟೇಲ್ ಸರ್ವೆ ನಡೆಸಿ ಅವರ ಒಂದು ನಕ್ಷೆ ಮತ್ತು ಅಂದಾಜನ್ನು ತಯಾರು ಮಾಡಿ ತರಿಸುತ್ತೇವೆ. ಮೊದಲು ಅದನ್ನು ಸರ್ವೆ ಮಾಡಿಸುತ್ತೇವೆ. ನಂತರ ಅದರ ಒಂದು ಅಂದಾಜು ನೋಡಿ ಅದಕ್ಕೆ ಎಷ್ಟು ವೆಚ್ಚ ಮಾಡಬೇಕಾಗುತ್ತದೆ. ಅನ್ನುವುದನ್ನು ತಿಳಿದು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಿಸಬೇಕಾಗುತ್ತದೆ.

Construction of a new Tank at Nilogal Village in Yelburga Taluk

277 SHRI L. S. DESAI (Yelburga).— Will the Minister for Minor Irrigation be pleased to state :—

(a) whether it is a fact that Government accorded sanction for construction of New Tank at Nilogal village, Yelburga Taluk, Raichur District;